ತಿಳಿಸೇ ನಿಯಮದ ಮೇರೆಗೆ

(೧) ತುಮಕೂರು ನಗರಕ್ಕೆ ನೀರನ್ನು ಒದಗಿಸುವ ಬಗ್ಗೆ

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರಕ್ಕೆ ಹೇಮಾವತಿ ನೀರನ್ನು ಒದಗಿಸುವ ಯೋಜನೆ ತಯಾರಾಗಿದೆ ಎಂದು ಇತ್ತೀರುವ ಹೇಳಿಕೆ ಮತ್ತು ತುಮಕೂರು ನಗರಕ್ಕೆ ನೀರು ಒದಗಿಸುವ ಪ್ರಸ್ತಾಪನೆ ಇಲ್ಲ ಎಂದು ಹೇಳಿಕೆ ಕೊಟ್ಟಿರುವ ಬಗ್ಗೆ ತುಮಕೂರು ಜಿಲ್ಲೆಯ ರೈತರು ಮತ್ತು ನಗರವಾಸಿಗಳಲ್ಲಿ ಉಂಟಾಗಿರುವ ಕಳವಳದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳ ಗಮನವನ್ನು ಸೆಳೆದು ಪ್ರಸ್ತಾಪಿಸಲು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ನ ಚೀಫ್ ಇಂಜಿನಿಯರ್‌ರವರು ಹೇಮಾವತಿ ನೀರನ್ನು ಬೆಂಗಳೂರಿಗೆ ತರುವ ಯೋಜನೆ ಮಾಡಲು ಸಾಧ್ಯವೇ ಎನ್ನುವುದರ ಬಗ್ಗೆ ಒಂದು ಪತ್ರ ಬರೆದಿದ್ದಾರೆ. ನಾವು ಜಲಮಂಡಲಿಯನ್ನೇನೂ ಕೇಳಿಲ್ಲ ಅವರಿಗೂ ಪತ್ರ ಬಂದಿದೆ. ಮುಂದಿನ ಕೆಲಸದ ಬಗ್ಗೆ ನಾವೇನೂ ಅದರ ಬಗ್ಗೆ ಕ್ರಮ ತೆಗೆದು ಕೊಂಡಿಲ್ಲ. ಹೀಗಿರುವಾಗ ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಇಷ್ಟು ಆತಂಕಪಡಲು ಕಾರಣ ಏನು ಅನ್ನುವುದು ನನಗೆ ಗೊತ್ತಾಗಲಿಲ್ಲ. ಮೂಲ ಯೋಜನೆಯಲ್ಲೂ ಸಹ ಇದರ ಬಗ್ಗೆ ಏನೂ ಇಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಹಾಜರಿಲ್ಲ.

ಶ್ರೀ ಬಿ. ಲಕ್ಕಪ್ಪ ಮತ್ತು ಇತರರು—ಹಾಜರಿಲ್ಲ.

(ii) ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರೂಪ್ ಪಂಚಾಯಿತಿಯೊಳಗೆ ಬರತಕ್ಕ ಪ್ರದೇಶದಲ್ಲಿ ೧೨೨ ಜನ ವ್ಯವಸಾಯ ಮಾಡುತ್ತಿದ್ದವರನ್ನು ಅರಣ್ಯ ಇಲಾಖಾ ಅಧಿಕಾರಿಗಳು ಖಾಲಿ ಮಾಡಿಸಿರುವ ಬಗ್ಗೆ

SRI M. VEERAPPA MOILY.—Mr. Speaker Sir, this is a matter regarding the action on the part of the Forest Officials to evict about 122 landless persons from the Lambanidoddi, Harijandoddi Kuppidoddi of Hegnur in Harohalli group Panchayat of Kanakapura Taluk.

About 122 landless persons have been in actual possession and enjoyment of the above lands since more than 25 years. The lands had been surveyed in the year 1977 and mahazar was also prepared with regard to the possession of the above persons. In an average 122 persons are in possession of 1 to 3 acres. On 27-7-1985, R.F.O. of Sathnur Range and his staff came to the lands started destroying the standing crops and dig the pits for the purpose of planting for the afforestation. The poor people have nothing else to depend upon and they will become destitutes if they are dispossesed.

The forest officials have set on reckless acts of destroying standing crops and dispossess them. Unless they are stopped, poor occupants will suffer irreparable loss and hardship. The Hon'ble Minister of State for Forest may kindly direct the officials to stop the attrocities being committed on the poor occupants.